**ಇಂದು ದಿನಾಂಕಃ 28-07-2023 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೊಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ಎಸ್.ಎನ್.ಬಿ. ವಕೀಲರಿಂದಃ-**

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ತೆಲಗು ಭಾಷೆ ಬರುತ್ತದೆ ಎಂದು ನುಡಿಯುತ್ತಾರೆ. ಪೊಲೀಸರು ಕನ್ನಡ ಭಾಷೆಯಲ್ಲಿ ಎನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರಾಸಾ-1 ಮತ್ತು ಅವಳ ತಂದೆ ತಾಯಿ, ಅಣ್ಣ ಬರೆಸಿದ್ದಾರೆ ಎಂದರೆ ಸರಿ. ಪೊಲೀಸರಿಗೆ ನಾನು ಯಾವದೇ ಹೇಳಿಕೆ ನೀಡಿಲ್ಲ. ಸಾಮಾನ್ಯವಾಗಿ ಯಾವದೇ ಕೆಲಸ ಇದ್ದರೆ ನನ್ನ ಗಂಡ ಹೋಗುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಯಾವದೇ ಮಾತುಕತೆಗೆ ನನ್ನ ಗಂಡ ಹೋಗುತ್ತಾರೆ ಎಂದರೆ ಸರಿ. ಪ್ರಾಸಾ-1 ರವರ ಮದುವೆ ಕಾಲಕ್ಕೆ ಮಾತುಕತೆ ಇದ್ದಾಗ ನಾನು ಹೋಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಅಲ್ಲಿ ಮಾತು ಕತೆಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

ನನಗೆ ಘಟನೆಯ ಬಗ್ಗೆ ಯಾವದೇ ಮಾಹಿತಿ ಇಲ್ಲದಿದ್ದರೂ ಪ್ರಾಸಾ-1 ರವರ ಮಾತು ಕೇಳಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನಡೆದಿದ್ದನ್ನು ಹೇಳಿದ್ದೇನೆ ಎಂದು ನುಡಿಯುತ್ತಾರೆ. ನಾನು ರುದೂನೂರಿಗೆ ಹೋಗಿದ ದಿನಾಂಕ ನನಗೆ ಗೊತಿಲ್ಲ. ಘಟನೆಯ ಬಗ್ಗೆ ನಾನು ರೂದನೂರನಲ್ಲಿ ಇದ್ದಾಗ ಒಬ್ಬ ಬಾಲಕ ಹೇಳಿದ್ದಾನೆ. ಸದರಿ ಬಾಲಕನ ಹೆಸರು ನನಗೆ ಗೊತ್ತಿಲ್ಲ. ಸದರಿ ಬಾಲಕ ರುದನೂರ ಗ್ರಾಮದವನಾಗಿರುತ್ತಾನೆ.

ಪ್ರಾಸಾ-3 ರವರ ತಂದೆ ತಾಯಿ ಬಡವರು ಎಂದರೆ ಸಾಕ್ಷಿ ಅಷ್ಟಕ್ಕೆ ಅಷ್ಟು ಇರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಸಹ ಬಡವರು ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ಎರಡನೆ ಆರೋಪಿಗೆ 1 ನೇ ಆರೋಪಿ ಒಬ್ಬನೆ ನೋಡಿಕೊಳ್ಳುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ಪ್ರಾಸಾ-3 ರವರು 1 ನೇ ಆರೋಪಿಗೆ ನಿನ್ನ ತಾಯಿಗೆ ಹೊರಹಾಕಿದರೆ ಮಾತ್ರ ನಾನು ನಿನ್ನ ಜೊತೆ ಇರುತ್ತೇನೆ ಎಂದು ಬೆದರಿಕೆ ಹಾಕುತ್ತಿರುತ್ತಾರೆ ನನಗೆ ಗೊತಿಲ್ಲ. ಪ್ರಾಸಾ-3 ರವರ ತಂದೆ ತಾಯಿ ಗಳ ಜೊತೆ ನನ್ನ ವೈಹಿವಾಟ ಇದ್ದ ಕಾರಣ ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಆ ದಿನ ರುದನೂರಗೆ ಹೋಗದೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿರುವ ಬಾಲಕ ನನಗೆ ಮತ್ತು ಅವನ ಪ್ರಾಸಾ-3 ರವರ ತಾಯಿಗೆ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾನೆ. ಸದರಿ ದ್ವಿಚಕ್ರ ವಾಹನದ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ.

1 ನೇ ಆರೋಪಿ ಹಾಗೂ ಪ್ರಾಸಾ-3 ರವರ ಮಧ್ಯ ಯಾವದೇ ಜಗಳ ಆಗದಿದ್ದರೂ ಆರೋಪಿತರಿಗೆ ಸತಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**